KATK920010602023

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ. ರವರ ನ್ಯಾಯಾಲಯ,**
**ತಿಪಟೂರು**

**C.C.No.**784/2023 **PW**-4, **CW**-4

**ದಿನಾಂಕ: 01.08.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | : | ಪ್ರಸನ್ನ |
| ತಂದೆಯ ಹೆಸರು | : | ಸಣ್ಣಮಲ್ಲಪ್ಪ |
| ವಯಸ್ಸು | : | 40 ವರ್ಷ |
| ಉದ್ಯೋಗ | : | ಅಬಕಾರಿ ಮುಖ್ಯಪೇದೆ<br>ತಿಪಟೂರು ಉಪವಿಭಾಗ |
| ವಾಸಸ್ಥಳ | : | ತಿಪಟೂರು |

**ಮುಖ್ಯ ವಿಚಾರಣೆ : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :-**

ನಾನು ದಿನಾಂಕಃ 10.03.2021 ರಿಂದ 05.02.2024 ರವರೆಗೆ ಅಬಕಾರಿ ಪೇದೆಯಾಗಿ ನಂತರ ದಿನಾಂಕಃ 05.02.2024 ರಿಂದ ಪ್ರಸ್ತುತ ಈ ದಿನದವರೆಗೆ ಅಬಕಾರಿ ಮುಖ್ಯ ಪೇದೆಯಾಗಿ ಕರ್ತವ್ಯವನ್ನು ನಿರ್ವಹಿಸುತ್ತಿದ್ದೇನೆ.

ದಿಃ 14-12-2022 ರಂದು ಅಬಕಾರಿ ಉಪ ಅಧೀಕ್ಷಕ ಕಚೇರಿ ತಿಪಟೂರು ಉಪ ವಿಭಾಗ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವಾಗ ಚಾಸಾ-1 ರವರಿಗೆ ಮಧ್ಯಾಹ್ನ 2.30 ಗಂಟೆಗೆ ದೂರವಾಣಿ ಮುಖಾಂತರ ಬಂದ ಮಾಹಿತಿ ಏನೆಂದರೆ

ತಿಪಟೂರು ತಾಲ್ಲೂಕು ನೊಣವಿನಕೆರೆ ಹೋಬಳಿ ಸೂಗೂರು ಗ್ರಾಮದ ಗೌರೀಶ ಎಂಬುವರು ತಮ್ಮ ಚಿಲ್ಲರೆ ಅಂಗಡಿಯಲ್ಲಿ ಅಕ್ರಮವಾಗಿ ಮದ್ಯವನ್ನು ದಾಸ್ತಾನು ಮಾಡಿಕೊಂಡು ಮಾರಾಟ ಮಾಡುತ್ತಿದ್ದಾರೆ ಎಂಬ ಮಾಹಿತಿ ಮೇರೆಗೆ ನಾನು ಚಾಸಾ-1 ಹಾಗೂ ಸಿಬ್ಬಂದಿಗಳೊಂದಿಗೆ ಸದರಿ ಗ್ರಾಮಕ್ಕೆ ತೆರಳಿ ಸದರಿ ಗ್ರಾಮದ ಕಲ್ಲೇಶ್ವರಸ್ವಾಮಿ ದೇವಸ್ಥಾನದ ಬಳಿ ನಿಂತಿದ್ದ ಇಬ್ಬರು ಸ್ಥಳೀಕರಾದ ಚಾಸಾ-2 ಮತ್ತು 3 ರವರಿಗೆ ಸದರಿ ಮಾಹಿತಿಯನ್ನು ತಿಳಿಸಿ ಒಂದು ವೇಳೆ ಗೌರೀಶ ಚಿಲ್ಲರೆ ಅಂಗಡಿಯಲ್ಲಿ ಅಕ್ರಮ ಮದ್ಯ ಸಂಗ್ರಹಿಸಿದ್ದಲ್ಲಿ ಪ್ರಕರಣ ದಾಖಲಿಸಲು ಪಂಚರಾಗಿ ಬರುವಿರಾ ಎಂದು ಕೇಳಲಾಗಿ ಅದಕ್ಕೆ ಅವರುಗಳು ಒಪ್ಪಿ ನಂತರ ಸದರಿ ಚಿಲ್ಲರೆ ಅಂಗಡಿಯ ಬಳಿಹೋಗಿದ್ದು ಅಂಗಡಿಯ ಬಾಗಿಲು ತೆಗೆದಿದ್ದು ಅಂಗಡಿಯಲ್ಲಿದ್ದ ವ್ಯಕ್ತಿಯು ಸಮವಸ್ತ್ರದಲ್ಲಿದ್ದ ನಮ್ಮ ಗಳನ್ನು ನೋಡಿ ಹೆದರಿ ಓಡಿ ಹೋಗಿರುತ್ತಾರೆ. ನಂತರ ಅವರಿಗೆ ಬಂದ ಮಾಹಿತಿಯನ್ನು ತಿಳಿಸಿ ನಿಮ್ಮ ಚಿಲ್ಲರೆ ಅಂಗಡಿಯನ್ನು ಶೋಧಿಸಬೇಕೆಂದು ತಿಳಿಸಿ ಕಾಲವಕಾಶ ಇಲ್ಲದ ಪ್ರಯುಕ್ತ ಕಲಂ 54 ರಂತೆ ಸ್ಥಳದಲ್ಲಿಯೇ ಶೋಧನಾ ಪತ್ರ ತಯಾರಿಸಿಕೊಂಡು ಪಂಚರು ಮತ್ತು ಆರೋಪಿಯ ಸಮಕ್ಷಮ ಸದರಿ ಅಂಗಡಿಯನ್ನು ಶೋದಿಸಲಾಗಿ ಅಂಗಡಿಯ ಕ್ಯಾಶ್ಕೌಂಟರ್ನ ಕೆಳಗಡೆ ಒಂದು ಪ್ಲಾಸಿಟಿಕ ಚೀಲ ಕಂಡು ಬಂದಿದ್ದು ಅನುಮಾನ ಬಂದುನಮ್ಮ ಸಿಬ್ಬಂದಿಯವರು ಚೀಲವನ್ನು ತೆರೆದು ನೋಡಿದಾಗ ಅದರೊಳಗೆ ಮದ್ಯ ತುಂಬಿದ ವಿವಿಧ ನಮೂನೆಯ ಟೆಟ್ರಾ ಪ್ಯಾಕೇಟುಗಳು ಕಂಡುಬಂದಿದೆ . ಅದರಲ್ಲ 90 ಮಿಲಿಯ 15 ಓರಿಜನಲ್ ಚಾಯ್ಸ, 16 ಎಂ.ಸಿ. ವಿಸ್ಕಿ ಟೆಟ್ರಾ ಪ್ಯಾಕೇಟುಗಳು, 60 ಹೈ ವಾರ್ಡ್ಸ್ ಟೆಟ್ರಾ ಪ್ಯಾಕೇಟುಗಳು ಕಂಡು ಬಂದವು. ನಂತರ ಆರೋಪಿಗೆ ಈ ರೀತಿ ನಿಗಧಿತ ಮಿತಿಗಿಂತ ಹೆಚ್ಚಿ ನ ಮದ್ಯವನ್ನು ದಾಸ್ತಾನು ಮಾಡಿಕೊಳ್ಳಲು ನಿನ್ನ ಬಳಿ ಯಾವುದಾದರೂ ಪರವಾನಿಗೆ ಇದೆಯಾ ಎಂದು ಕೇಳಲಾಗಿ ಯಾವುದೇ ಬಿಲ್ಲಾಗಲೀ , ಪರವಾನಿಗೆಯಾಗಲೀ ಇಲ್ಲ ಎಂದು ತಿಳಿಸಿರುತ್ತಾರೆ. ಈ ರೀತಿ ಅಕ್ರಮವಾಗಿ ಮದ್ಯ ಸಂಗ್ರಹಿಸಿ ಮಾರಾಟಮಾಡುವುದು

ಕಾನೂನು ಬಾಹಿರ ಎಂದು ತಿಳಿಸಿ ಸ್ಥಳದಲ್ಲಿ ದೊರೆತ ಎಲ್ಲಾ ಮದ್ಯವನ್ನು ರಾ. ವಿಶ್ಲೇಷಣೆಗಾಗಿ ಮಾದರಿ ತೆಗೆದು ಒಪಂದು ಪ್ಲಾಸಿಟಿಕ್ ಚೀಲ ದಲ್ಲಿ ಹಾಕಿ ದಾರದಿಂದ ಕಟ್ಟಿ ಇಲಾಖಾ ಸೀಲು ನಂ.27 ರಿಂದ ಮೊಹರು ಮಾಡಲಾಗಿರುತ್ತದೆ. ನಂತರ ಮಾದರಿ ಚೀಟಿಗಳನ್ನು ತಯಾರಿಸಿ ಚೀಲಕ್ಕೆ ಅಂಟಿಸಿ ಪಂಚರುಗಳ ಸಹಿಯನ್ನು ಪಡೆಯಲಾಯಿತು. ನಿಗದಿತ ಮದ್ಯವನ್ನುದಾಸ್ತಾನು ಮಾಡಿಕೊಂಡಿರುವುದರ ಸತ್ಯಾಂಶ ಮತು ತಸನ್ನಿವೇಶಗಳನ್ನು ವಿಚಾರಣೆಗೆ ಒಳಪಡಿಸಲು ಆತನಿಗೆ ಸಿ ಅರ್. ಪಿಸಿ ಕಲ,41 (ಎ) ಅಡಿಯಲ್ಲಿ ನೋಟೀಸು ನೀಡಲಾಯಿತು. ದಿಃ17-12-2022 ರಂದು ನಾನು ರಾಸಾಯನಿಕ ಪ್ರಯೋಗಾಲಯಕ್ಕೆ ದೊರೆತ ಮದ್ಯದ ಸ್ಯಾಂಪಲ್ ಗಳನ್ನು ಪರಿಶೀಲನೆಗೆಂದು ಮನವಿಯನ್ನು ನೀಡಿರುತ್ತೇನೆ. ಸದರಿ ಸ್ಥಳದ ಚಕ್ಕುಬಂಧಿ ಪೂ- ಗ್ರಾಮ ಠಾಣಾ ರಸ್ತೆ , ಪ- ಆರೋಪಿತರಿಗೆ ಸೇರಿದ ಖಾಲಿ, ಜಾಗ , ಉ- ಮಹದೇವಯ್ಯ ರವರಿಗೆಸೇರಿದ ವಾಸದ ಜಾಗ, ದ- ಆರೋಪಿಗೆ ಸೇರಿದ ವಾಸದ ಮನೇಇದೆ. ಸದರಿ ಮಹಜರು ವರದಿಯನ್ನು ಸ್ಥಳದಲ್ಲಿಯೇ 3.00 ರಿಂದ 4.30 ಗಂಟೆಯವರೆಗೆ ಜರುಗಿಸಲಾಯಿತು. ಈ ಹಂತದಲ್ಲಿ ಸಾಕ್ಷಿಗೆ ಒಂದು ದಾಖಲಾತಿ ತೋರಿಸಿದ್ದು ಅದನ್ನು ಪಂಚನಾಮೆ ಅಗಿದ್ದು ಅದನ್ನು ನಿಪಿ.1 ಎಂದು, ಸಾಕ್ಷಿಯ ಸಹಿಯನ್ನು ನಿಪಿ.1(ಬಿ) ಎಂದು ಗುರುತಿಸಲಾಯಿತು. ಈ ಹಂತದಲ್ಲಿ ಸಾಕ್ಷಿಗೆ ಮತ್ತೊಂದು ನಿಪಿ.9 ದಾಖಲಾತಿ ತೋರಿಸಿದ್ದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.9(ಬಿ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಅರೋಪಿಯನ್ನು ಸಾಕ್ಷಿ ನೋಡಿಗುರುತಿಸಿರುತ್ತಾರೆ. ನ್ಯಾಯಾಲಯದ ಮುಂದಿರುವ ಮುದ್ದೆವಮಾಲು ನಂ.1 ರಿಂದ 3 ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು : ಆರೋಪಿ ಪರ ಶ್ರೀ. B.S ವಕೀಲರಿಂದ :-**

ಸೂಗೂರು ಗ್ರಾಮಕ್ಕೆ ನಾವು ಮಧ್ಯಾಹ್ನ 2-30 ಗಂಟೆ ಸಮಯಕ್ಕೆ ತೆರಳಿರುತ್ತೇನೆ.

ಆ ದಿನದಂದು ಘಟನಾ ಸ್ಥಳಕ್ಕೆ ಚಾಸಾ-1, ನಾನು ಹಾಗೂ ವಾಹನದ ಚಾಲಕ ತೆರಳಿರುತ್ತೇನೆ. ಸೂಗೂರು ಗ್ರಾಮಕ್ಕೆ ಮಧ್ಯಾಹ್ನ 3-00 ಗಂಟೆ ಸಮಯದಲ್ಲಿ ತೆರಳಿರುತ್ತೇನೆ. ಸೂಗೂರು ಗ್ರಾಮಕ್ಕೆ ಚನ್ನರಾಯಪಟ್ಟಣ ಮಾರ್ಗವಾಗಿ ಕುರುಬರಹಳ್ಳಿ ಮೂಲಕ ಸೂಗೂರು ಗ್ರಾಮಕ್ಕೆ ತೆರಳಿರುತ್ತೇನೆ. ಘಟನಾ ಸ್ಥಳಕ್ಕೆ ಹೋದ ಬಗ್ಗೆ ನಮ್ಮ ಠಾಣೆಯ movement register ನಲ್ಲಿ ನಮೂದು ಮಾಡಿರುತ್ತೇನೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಿಪಿ-1 ರಲ್ಲಿ ಅಮಾನತುಪಡಿಸಿಕೊಂಡ ಮದ್ಯದ ಟೆಟ್ರಾ ಪ್ಯಾಕೇಟ್ ಗಳ ಮೇಲೆ ಇದ್ದಂತಹ ಬ್ಯಾಚ್ ನಂಬರ್, manufacturing date ಯಾವುದನ್ನು ನಮೂದಿಸಿಲ್ಲ ಎಂದರೆ ಸಾಕ್ಷಿಯು ಅವೆಲವೂ ಹರಿದು ಹೋಗಿತ್ತು ಎಂದು ನುಡಿಯುತ್ತಾರೆ. ಸದರಿ ಮಾಹಿತಿಯನ್ನು ನಮೂದು ಮಾಡಿಲ್ಲದ ಕಾರಣ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನಿಪಿ-1 ರಂತೆ ಪಂಚನಾಮೆಗೆ ಹೋಗಿರುವುದಿಲ್ಲ, ಚಾಸಾ-1 ರವರ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನಿಪಿ-1 ರಂತೆ ಪಂಚನಾಮೆಯನ್ನು ನಿಮ್ಮ ಠಾಣೆಯಲ್ಲಿಯೇ ಸೃಷ್ಟಿ ಮಾಡಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಹಾಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲದೇ ಇದ್ದರೂ ನಿಮ್ಮ ಮೇಲಾಧಿಕಾರಿಯ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಮುಮಾ-1 ರಿಂದ 3 ನಿಮ್ಮ ಇಲಾಖೆಗೆ ಸಂಬಂಧಪಟ್ಟ ವಸ್ತು ಆಗಿರುತ್ತದೆ, ಅದು ಆರೋಪಿಗೆ ಸಂಬಂಧಪಟ್ಟ ವಸ್ತು ಅಲ್ಲ ಎಂದರೆ ಸರಿಯಲ್ಲ. ನೀವು ಯಾವುದೇ FSL ಗೆ ಮುಮಾ ತೆಗೆದುಕೊಂಡು ಹೋಗಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)**

**Sd/-**

**ಅಪರ ಸಿವಿಲ್ ನ್ಯಾಯಾಧೀಶರು, ತಿಪಟೂರು.**